## 1. ಮಾಡ್ಯೂಲ್ ಮತ್ತು ಇದರ ರಚನೆಯ ವಿವರಗಳು

| ಮಾಡ್ಯೂಲ್ ವಿವರ | |
|---|---|
| ವಿಷಯ | ಅರ್ಥಶಾಸ್ತ್ರ |
| ಕೋರ್ಸ್ | ಭಾರತೀಯ ಆರ್ಥಿಕ ಅಭಿವೃದ್ಧಿ 01 (ತರಗತಿ XI , ಸೆಮಿಸ್ಟರ್ - 1) |
| ಮಾಡ್ಯೂಲ್ ಶೀರ್ಷಿಕೆ | 1991 ರಿಂದ ಆರ್ಥಿಕ ಸುಧಾರಣೆ - ಭಾಗ 2 |
| ಮಾಡ್ಯೂಲ್ ಐಡಿ | keec_10302 |
| ಪೂರ್ವಾಪೇಕ್ಷಿತ ಅಂಶಗಳು | 1950-1990 ರವರಿಗಿನ ಭಾರತೀಯ ಆರ್ಥಿಕತೆಯ ಬಗ್ಗೆ ತಿಳಿವಳಿಕೆ |
| ಉದ್ದೇಶಗಳು | ವಿದ್ಯಾರ್ಥಿಗಳು ಈ ಪಾಠವನ್ನು ಓದಿ ಕಲಿತ ನಂತರ ಈ ಕೆಳಗಿನ ಅಂಶಗಳನ್ನು ಅರ್ಥಮಾಡಿಕೊಳ್ಳುತ್ತಾರೆ:<br>• ಖಾಸಗೀಕರಣ<br>• ಜಾಗತೀಕರಣ<br>• ಹೊರಗುತ್ತಿಗೆ<br>• ವಿಶ್ವ ವ್ಯಾಪರ ಸಂಸ್ಥೆ (ಡಬ್ಲೂಟಿಓ)<br>• ಎಲ್‌ಪಿಜಿ ನೀತಿಗಳ ಮೌಲ್ಯನಿರ್ಣಯ |
| ಪ್ರಮುಖ ಪದಗಳು | ಖಾಸಗೀಕರಣ, ಜಾಗತೀಕರಣ, ಹೊರಗುತ್ತಿಗೆ, ಡಬ್ಲೂಟಿಓ |

## 2. Development Team

| Role | Name | Affiliation |
|---|---|---|
| National MOOC Coordinator (NMC) | Prof. Amarendra P. Behera | CIET, NCERT, New Delhi |
| Program Coordinator | Dr. Mohd. Mamur Ali | CIET, NCERT, New Delhi |
| Course Coordinator (CC) / PI | Prof. Neeraja Rashmi | DESS, NCERT, New Delhi |
| Subject Matter Expert (SME) | Mr. Naveen Sadhu | Guru Nanak Public School, Rajouri Garden, New Delhi |
| Review Team | Dr. Meera Malhan<br>Dr. Himanshu Singh | DCAC, University of Delhi,<br>Satyawati College (Eve.), University of Delhi |
| Translator | Jnana Murthy B.R. | Resource Person, National Translation Mission, Central Institute of Indian Languages, Mansagangotri, Mysuru, Karnataka |

## ಪರಿವಿಡಿ:

1. ಖಾಸಗೀಕರಣ
2. ಖಾಸಗೀಕರಣದ ಪರ ಮತ್ತು ವಿರುದ್ಧದ ವಾದಗಳು
3. ಜಾಗತೀಕರಣ
   - 3.1 ಜಾಗತೀಕರಣದ ಸಕಾರಾತ್ಮಕ ಮತ್ತು ನಕಾರಾತ್ಮಕ ಲಕ್ಷಣಗಳು
   - 3.2 ಹೊರಗುತ್ತಿಗೆ
   - 3.3 ವಿಶ್ವ ವ್ಯಾಪಾರ ಸಂಸ್ಥೆ (ಡಬ್ಲೂಟಿಒ)
4. ಎಲ್‌ಪಿಜಿ ನೀತಿಗಳ ಮೌಲ್ಯನಿರ್ಣಯ
   - 4.1 ಆರ್ಥಿಕ ಸುಧಾರಣೆಗಳ ಪರವಾದ ವಾದಗಳು
   - 4.2 ಆರ್ಥಿಕ ಸುಧಾರಣೆಗಳ ಟೀಕೆ
5. ಸಾರಾಂಶ

## 1. ಖಾಸಗೀಕರಣ

ಆರ್ಥಿಕ ಸುಧಾರಣೆಗಳ ಮತ್ತೊಂದು ಪ್ರಮುಖ ಲಕ್ಷಣವೆಂದರೆ ಖಾಸಗೀಕರಣದ ನೀತಿಯ ಪ್ರಚಾರ. ಈ ನೀತಿಯಡಿಯಲ್ಲಿ ಖಾಸಗಿ ವಲಯಕ್ಕೆ ವಿವಿಧ ರೀತಿಯ ಆರ್ಥಿಕ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರ ವಹಿಸಲು ಅವಕಾಶ ನೀಡಲಾಗಿದೆ. ಇದರರ್ಥ, ಖಾಸಗೀಕರಣವು ಆರ್ಥಿಕತೆಯಲ್ಲಿ ರಾಷ್ಟ್ರ/ಸಾರ್ವಜನಿಕ ವಲಯದ ಭಾಗವಹಿಸುವಿಕೆಯನ್ನು ಕಡಿಮೆ ಮಾಡುವ ಪ್ರಕ್ರಿಯೆ ಎಂದು ನಾವು ಹೇಳಬಹುದು.

**ಖಾಸಗೀಕರಣ ಎಂದರೆ ಸಾರ್ವಜನಿಕ ವಲಯದ ಉದ್ಯಮಗಳ ಮಾಲೀಕತ್ವ, ನಿರ್ವಹಣೆ ಮತ್ತು ನಿಯಂತ್ರಣವನ್ನು ಖಾಸಗಿ ವಲಯದ ಉದ್ಯಮಿಗಳಿಗೆ ವರ್ಗಾಯಿಸುವುದಾಗಿದೆ.**

ಖಾಸಗೀಕರಣವು ದೇಶದ ಆರ್ಥಿಕ ಚಟುವಟಿಕೆಗಳಲ್ಲಿ ಖಾಸಗಿ ವಲಯದ ಹೆಚ್ಚಿನ ಪಾತ್ರವನ್ನು ಸೂಚಿಸುತ್ತದೆ.

ವರ್ಷಗಳು ಕಳೆದಂತೆ ಭಾರತ ಸರ್ಕಾರ ತನ್ನ ಪಾಲುದಾರಿಕೆಯನ್ನು ಐಪಿಸಿಎಲ್, ಐಬಿಪಿ, ಮಾರುತಿ ಉದ್ಯೋಗ್ ಸೇರಿದಂತೆ ಹಲವಾರು ಸಾರ್ವಜನಿಕ ಉದ್ಯಮಗಳಲ್ಲಿ ತೊಡಗಿಸಿಕೊಂಡಿದೆ.

ಖಾಸಗೀಕರಣವನ್ನು ಈ ಕೆಳಗಿನ ವಿಧಾನಗಳಲ್ಲಿ ಮಾಡಬಹುದು:

1. **ಸಾರ್ವಜನಿಕ ವಲಯದ** ಕಂಪನಿಗಳ ಮಾಲೀಕತ್ವ ಮತ್ತು ನಿರ್ವಹಣೆಯನ್ನು ಸರ್ಕಾರದಿಂದ ಖಾಸಗಿ ವಲಯಕ್ಕೆ ವರ್ಗಾಯಿಸುವುದು.

2. ಸಾರ್ವಜನಿಕ ವಲಯದ ಸಂಸ್ಥೆಗಳ (ಪಿಎಸ್‌ಯು) ಇಕ್ವಿಟಿಯ ಭಾಗವನ್ನು ಸಾರ್ವಜನಿಕರಿಗೆ ಮಾರಾಟ ಮಾಡುವ ಮೂಲಕ ಪಿಎಸ್‌ಯುಗಳನ್ನು ಖಾಸಗೀಕರಣಗೊಳಿಸುವುದು. ಈ ಪ್ರಕ್ರಿಯೆಯನ್ನು ಬಂಡವಾಳ ಹಿಂದೆಗೆದುಕೊಳ್ಳುವಿಕೆ ಎಂದು **ಕರೆಯಲಾಗುತ್ತದೆ**.
3. ಖಾಸಗಿ ವಲಯದ ಕೈಗಾರಿಕೆಗಳು ಸಾರ್ವಜನಿಕ **ವಲಯಕ್ಕೆ ಪ್ರತ್ಯೇಕವಾಗಿ** ಕಾಯ್ದಿರಿಸಿದ ಕೈಗಾರಿಕೆಗಳಿಗೆ ಪ್ರವೇಶಿಸುವುದು.
4. **ಸಾರ್ವಜನಿಕ ವಲಯದ ವ್ಯಾಪ್ತಿಯನ್ನು ಸೀಮಿತಗೊಳಿಸುವುದು** ಮತ್ತು ಅಸ್ತಿತ್ವದಲ್ಲಿರುವ ಸಾರ್ವಜನಿಕ ವಲಯಯವನ್ನು ಮತ್ತಷ್ಟು ವಿಸ್ತರಣೆ ಮಾಡದಿರುವುದು.

ಖಾಸಗೀಕರಣದ ಉದ್ದೇಶವು ಹಣಕಾಸಿನ ಶಿಸ್ತನ್ನು ಸುಧಾರಿಸುವುದು ಮತ್ತು ಆಧುನೀಕರಣಕ್ಕೆ ಅನುಕೂಲವಾಗಿಸುವುದು. ಹಾಗೆಯೇ ಖಾಸಗಿ ಬಂಡವಾಳ ಮತ್ತು ವ್ಯವಸ್ಥಾಪಕ ಸಾಮರ್ಥ್ಯಗಳು ಪಿಎಸ್‌ಯುಗಳ ಕಾರ್ಯಕ್ಷಮತೆಯನ್ನು ಸುಧಾರಿಸಲು ಸಹಾಯ ಮಾಡುತ್ತವೆ ಎಂದು ನಂಬಲಾಗಿತ್ತು.

## 2. ಖಾಸಗೀಕರಣದ ಪರವಾದ ಮತ್ತು ವಿರುದ್ಧವಾದ ವಾದಗಳು

ಸಾರ್ವಜನಿಕ ವಲಯದ ಉದ್ಯಮಗಳ ಕಳಪೆ ಸಾಧನೆಯ ದೃಷ್ಟಿಯಿಂದ, ಅವುಗಳು ಭಾರಿ ನಷ್ಟ ಅನುಭವಿಸಿದವು ಮತ್ತು ಹೆಚ್ಚುತ್ತಿರುವ ಅನುದಾನ (ಸಬ್ಸಿಡಿ) ಪಾವತಿಗಳಿಂದಾಗಿ ಆರ್ಥಿಕತೆಯ ಮೇಲೆ ಹೆಚ್ಚಿನ ಹೊರೆ ಬೀರುತ್ತಿದ್ದವು. ಖಾಸಗೀಕರಣವು ಸರ್ಕಾರದ ಆರ್ಥಿಕ ಹೊರೆಯನ್ನು ಕಡಿಮೆ ಮಾಡುತ್ತದೆ. ಖಾಸಗೀಕರಣವು ಸಾರ್ವಜನಿಕ ವಲಯದ ಉದ್ಯಮಗಳ ಏಕಸ್ವಾಮ್ಯದ ಸ್ಥಾನವನ್ನು ರದ್ದುಗೊಳಿಸುತ್ತದೆ ಮತ್ತು ಈ ಉದ್ಯಮಗಳ ಸ್ಪರ್ಧಾತ್ಮಕ ಶಕ್ತಿ ಮತ್ತು ದಕ್ಷತೆಯನ್ನು ಸುಧಾರಿಸಲು ಸಹಾಯ ಮಾಡುತ್ತದೆ. ನಿರ್ವಹಣೆಯು ಅನಗತ್ಯ ರಾಜಕೀಯ ಪ್ರಭಾವ, ಒತ್ತಡ ಮತ್ತು ಹಸ್ತಕ್ಷೇಪಕ್ಕೆ ಒಳಪಡದ ಕಾರಣ ವ್ಯವಸ್ಥಾಪಕ ದಕ್ಷತೆಯನ್ನು ಸುಧಾರಿಸಲು ಇದು ಸಹಾಯ ಮಾಡುತ್ತದೆ. ಅನಗತ್ಯ ಸಿಬ್ಬಂದಿಯನ್ನು ನೇಮಿಸಿಕೊಳ್ಳಲು ಯಾವುದೇ ರಾಜಕೀಯ ಒತ್ತಡವಿರುವುದಿಲ್ಲವಾದುದರಿಂದ ಇದು ಸಂಸ್ಥೆಯ ದಕ್ಷತೆಗೆ ಕಾರಣವಾಗುತ್ತದೆ. ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಯಶಸ್ಸನ್ನು ಪಡೆಯಲು ತ್ವರಿತ ಮತ್ತು ಸಮಯೋಚಿತ ನಿರ್ಧಾರಗಳು ಮುಖ್ಯವಾಗುತ್ತವೆ. ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಹೆಚ್ಚಿನ ನಮ್ಯತೆಯನ್ನು ನೀಡಲು ಖಾಸಗೀಕರಣದ ನೀತಿಯು ಸಹಕಾರಿಯಾಗುತ್ತದೆ, ಏಕೆಂದರೆ ನಿರ್ವಹಣೆ ಯಾವುದೇ ಸರ್ಕಾರದ ಹಸ್ತಕ್ಷೇಪದಿಂದ ಮುಕ್ತವಾಗಿರುತ್ತದೆ. ಖಾಸಗೀಕರಣದ ಅಡಿಯಲ್ಲಿ ಗ್ರಾಹಕರು ಸರ್ವೋಚ್ಚರು. ಖಾಸಗಿ ಉದ್ಯಮಗಳ ಉಳಿವು ಗ್ರಾಹಕರ ತೃಪ್ತಿಯನ್ನು ಅವಲಂಬಿಸಿರುತ್ತದೆ. ಖಾಸಗೀಕರಣವು ಗ್ರಾಹಕರನ್ನು ನೋಡಿಕೊಳ್ಳಲು ಕಾರಣವಾಗುತ್ತದೆ ಏಕೆಂದರೆ ಮಾರುಕಟ್ಟೆಯನ್ನು ರಚಿಸುವ ಮತ್ತು ಉಳಿಸಿಕೊಳ್ಳುವ ಅವಶ್ಯಕತೆಯಿದೆ. ಆದ್ದರಿಂದ, ಸೇವೆಯ ಗುಣಮಟ್ಟ ಸುಧಾರಿಸುತ್ತದೆ. ಇದಲ್ಲದೆ, ಈ

ಮೊದಲು ಸಾರ್ವಜನಿಕ ವಲಯಕ್ಕೆ ಕಾಯ್ದಿರಿಸಲಾಗಿದ್ದ ಕ್ಷೇತ್ರಗಳಿಗೆ ಖಾಸಗೀಕರಣವು ಅವಕಾಶ ಒದಗಿಸುತ್ತದೆ, ಉದಾಹರಣೆಗೆ: ವಿಮಾ ಕ್ಷೇತ್ರ. ಇದು ಖಾಸಗಿ ವಲಯದ ಹೂಡಿಕೆಯನ್ನು ಹೆಚ್ಚಿಸುತ್ತದೆ, ಇದು ಆರ್ಥಿಕತೆಯಲ್ಲಿ ಹೆಚ್ಚಿನ ಉದ್ಯೋಗ ಮತ್ತು ಆದಾಯ ಗಳಿಸುವ ಅವಕಾಶಗಳನ್ನು ಸೃಷ್ಟಿಸುತ್ತದೆ.

**ಖಾಸಗೀಕರಣದ ವಿರುದ್ಧದ ವಾದಗಳು**

ಖಾಸಗೀಕರಣದ ಪ್ರಕ್ರಿಯೆಯಲ್ಲಿ ಸಾಮಾಜಿಕ ಕಲ್ಯಾಣ ಅಥವಾ ಏಳಿಗೆಯನ್ನು ನಿರ್ಲಕ್ಷಿಸಲಾಗಿದೆ ಎಂದು ವಾದಿಸಲಾಗುತ್ತಿದೆ. ಖಾಸಗಿ ವಲಯದ ಉದ್ಯಮಗಳು ಮುಖ್ಯವಾಗಿ ಲಾಭ ಹೆಚ್ಚಿಸುವ ಉದ್ದೇಶದಿಂದ ಕಾರ್ಯನಿರ್ವಹಿಸುತ್ತವೆ ಮತ್ತು ಈ ವ್ಯವಸ್ಥೆಯು ಬಡಜನರ ಸಾಮಾಜಿಕ ಕಲ್ಯಾಣವನ್ನು ಖಾತರಿಪಡಿಸುವುದಿಲ್ಲ. ಖಾಸಗಿ ವಲಯವು ಅಪಾಯಕಾರಿ ಮತ್ತು ಕಡಿಮೆ ಲಾಭದಾಯಕತೆಯೊಂದಿಗೆ ದೀರ್ಘಾವಧಿಯ ಯೋಜನೆಗಳಲ್ಲಿ ಆಸಕ್ತಿ ವಹಿಸುವುದಿಲ್ಲ. ಇದು ದೇಶದ ಮೂಲ ಮತ್ತು ಭಾರೀ ಕೈಗಾರಿಕೆಗಳು ಮತ್ತು ಮೂಲಸೌಕರ್ಯಗಳ ಬೆಳವಣಿಗೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು. ಭಾರತದಲ್ಲಿ ಮೂಲಸೌಕರ್ಯದಲ್ಲಿನ ಹೂಡಿಕೆ 1991-92 ರಲ್ಲಿ ಜಿಡಿಪಿಯ 5.4 ಪ್ರತಿಶತದಿಂದ 1997-98 ರಲ್ಲಿ 4.6 ಕ್ಕೆ ಇಳಿದಿದೆ ಎಂದು ವಿಶ್ವಬ್ಯಾಂಕ್ ಅಧ್ಯಯನವು ಅಂದಾಜಿಸಿದೆ. ಸರ್ಕಾರದ ಒಳಗೊಳ್ಳುವಿಕೆಯಲ್ಲಿನ ಕಡಿತವು ಸಾರ್ವಜನಿಕ ಏಕಸ್ವಾಮ್ಯವನ್ನು ಖಾಸಗಿ ಏಕಸ್ವಾಮ್ಯಕ್ಕೆ ಬದಲಿಸಲು ಕಾರಣವಾಗಬಹುದು, ಇದು ದಕ್ಷ ಖಾಸಗಿ ಮಾಲೀಕರಿಂದ ಏಕಸ್ವಾಮ್ಯದ ಶೋಷಣೆಗೆ ಕಾರಣವಾಗಬಹುದು. ಖಾಸಗಿ ಏಕಸ್ವಾಮ್ಯಕ್ಕೆ ಹೋಲಿಸಿದರೆ ರಾಷ್ಟ್ರ ಏಕಸ್ವಾಮ್ಯವನ್ನು ಖಂಡಿತವಾಗಿ ಆದ್ಯತೆ ನೀಡಬೇಕಾಗುತ್ತದೆ. ಖಾಸಗೀಕರಣದ ಅಡಿಯಲ್ಲಿ, ಹಿಂಪಡೆಯುವಿಕೆ ಮತ್ತು ಅದರ ಪರಿಣಾಮವಾಗಿ ನಿರುದ್ಯೋಗದ ಭಯ ಯಾವಾಗಲೂ ಇರುತ್ತದೆ. ಅನೇಕ ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ಖಾಸಗೀಕರಣವು ಅನೇಕ ಕಾರ್ಮಿಕರ ಸ್ವಯಂಪ್ರೇರಿತ ನಿವೃತ್ತಿಗೆ ಕಾರಣವಾಗಿದೆ. ಈ ರೀತಿಯಾಗಿ, ಈ ನೀತಿಯು ದೇಶದಲ್ಲಿ ಹೆಚ್ಚಿನ ನಿರುದ್ಯೋಗ ಮತ್ತು ಬಡತನಕ್ಕೆ ಕಾರಣವಾಗಬಹುದು.

**ನವರತ್ನಗಳು ಮತ್ತು ಮಿನಿ ರತ್ನಗಳು**

ಭಾರತದಲ್ಲಿ ಪಿಎಸ್‌ಯುಗಳ ವಿಷಯಕ್ಕೆ ಸಂಬಂಧಿಸಿದಂತೆ ನವರತ್ನಗಳು ಎಂದರೆ ಒಂಬತ್ತು ಲಾಭ ಗಳಿಸುವ ಕಂಪನಿಗಳು ಎಂತರ್ಥ, ಇವುಗಳನ್ನು ರಾಜ ವಿಕ್ರಮಾದಿತ್ಯನ ಆಸ್ಥಾನದಲ್ಲಿ ವಿರಾಜಮಾನರಾಗಿದ್ದ ಒಂಬತ್ತು ಶ್ರೇಷ್ಠ ಮತ್ತು ಅಪರೂಪದ ಬುದ್ಧಿವಂತಿಕೆಯ ಪುರುಷರಿಗೆ ಹೋಲಿಸಲಾಗಿದೆ. ನಿರ್ವಹಣಾ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಸ್ವಾಯತ್ತತೆಯನ್ನು ನೀಡುವ ಮೂಲಕ ಸಾರ್ವಜನಿಕ ವಲಯದ ಸಂಸ್ಥೆಗಳ ದಕ್ಷತೆಯನ್ನು ಸುಧಾರಿಸುವುದು ಈ

ಶೀರ್ಷಿಕೆಗಳನ್ನು ನೀಡುವ ಉದ್ದೇಶವಾಗಿತ್ತು. ಉದಾಹರಣೆಗೆ, ಕೆಲವು ಪಿಎಸ್‌ಯುಗಳಿಗೆ ನವರತ್ನಗಳು ಮತ್ತು ಮಿನಿ ರತ್ನಗಳು ಎಂದು ವಿಶೇಷ ಸ್ಥಾನಮಾನ ನೀಡಲಾಗಿದೆ. ಉದಾಹರಣೆಗೆ, ಬಿಎಚ್‌ಇಎಲ್, ಬಿಪಿಸಿಎಲ್, ಎಸ್‌ಎಐಎಲ್, ಇತ್ಯಾದಿ. ಇವುಗಳಿಗೆ ವಿವಿಧ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ, ಕಂಪನಿಯನ್ನು ಸಮರ್ಥವಾಗಿ ನಡೆಸಲು ಮತ್ತು ಅವುಗಳ ಲಾಭವನ್ನು ಹೆಚ್ಚಿಸಲು ನಿರ್ವಹಣಾ ಮತ್ತು ಕಾರ್ಯಾಚರಣೆಯ ಸ್ವಾಯತ್ತತೆಯನ್ನು ನೀಡಲಾಯಿತು. ನವರತ್ನ ಸ್ಥಾನಮಾನವನ್ನು ನೀಡುವುದರಿಂದ ಈ ಕಂಪನಿಗಳ ಉತ್ತಮ ಕಾರ್ಯಕ್ಷಮತೆಗೆ ಕಾರಣವಾಯಿತು. ಇವುಗಳಲ್ಲದೆ, ಇತರ 97 ಲಾಭ ಗಳಿಸುವ ಉದ್ಯಮಗಳಿಗೆ ಹೆಚ್ಚಿನ ಕಾರ್ಯಾಚರಣೆ, ಹಣಕಾಸು ಮತ್ತು ನಿರ್ವಹಣಾ ಸ್ವಾಯತ್ತತೆಯನ್ನು ನೀಡಲಾಯಿತು ಮತ್ತು ಅವುಗಳನ್ನು “ಮಿನಿ ರತ್ನಗಳು” ಎಂದು ಕರೆಯಲಾಯಿತು.

2016 ರ ಜೂನ್ ತಿಂಗಳಿನಲ್ಲಿ 17 ನವರತ್ನಗಳು ಇದ್ದವು, ಅವುಗಳೆಂದರೆ:

1. ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
2. ಭಾರತ್ ಪೆಟ್ರೋಲಿಯಂ ಕಾರ್ಪೊರೇಶನ್ ಲಿಮಿಟೆಡ್
3. ಕಂಟೈನರ್ ಕಾರ್ಪೊರೇಶನ್ ಆಫ್ ಇಂಡಿಯಾ ಲಿಮಿಟೆಡ್
4. ಎಂಜಿನಿಯರ್ಸ್ ಇಂಡಿಯಾ ಲಿಮಿಟೆಡ್
5. ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್
6. ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಶನ್ ಲಿಮಿಟೆಡ್
7. ಮಹಾನಗರ ದೂರವಾಣಿ ನಿಗಮ್ ಲಿಮಿಟೆಡ್
8. ನ್ಯಾಷನಲ್ ಅಲ್ಯೂಮಿನಿಯಂ ಕಂಪನಿ ಲಿಮಿಟೆಡ್
9. ರಾಷ್ಟ್ರೀಯ ಕಟ್ಟಡಗಳ ನಿರ್ಮಾಣ ನಿಗಮ ಲಿಮಿಟೆಡ್
10. ಎನ್‌ಎಂಡಿಸಿ ಲಿಮಿಟೆಡ್
11. ನೈವೇಲಿ ಲಿಗ್ನೈಟ್ ಕಾರ್ಪೊರೇಶನ್ ಲಿಮಿಟೆಡ್
12. ಆಯಿಲ್ ಇಂಡಿಯಾ ಲಿಮಿಟೆಡ್
13. ಪವರ್ ಫೈನಾನ್ಸ್ ಕಾರ್ಪೊರೇಶನ್ ಲಿಮಿಟೆಡ್
14. ಪವರ್ ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್
15. ರಾಷ್ಟ್ರೀಯ ಇಸ್ಪತ್ ನಿಗಮ್ ಲಿಮಿಟೆಡ್
16. ರೂರಲ್ ಎಲೆಕ್ಟ್ರಿಫಿಕೇಷನ್ ಕಾರ್ಪೊರೇಷನ್ ಲಿಮಿಟೆಡ್
17. ಶಿಪ್ಪಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್

## 3. ಜಾಗತೀಕರಣ

'ಜಾಗತೀಕರಣ' ಎಂಬ ಪದವು ಜಗತ್ತಿಗೆ ಆರ್ಥಿಕತೆಯ ಪ್ರಾರಂಭವನ್ನು ಸೂಚಿಸುತ್ತದೆ. ಇದು ವಿಶ್ವದ ಇತರ ದೇಶಗಳೊಂದಿಗೆ ಉತ್ಪಾದನೆ, ವ್ಯಾಪಾರ ಮತ್ತು ಹಣಕಾಸು ವಹಿವಾಟುಗಳಿಗೆ ಸಂಬಂಧಿಸಿದ ಆರ್ಥಿಕತೆಯ ಪರಸ್ಪರ ಕ್ರಿಯೆಯನ್ನು ಸೂಚಿಸುತ್ತದೆ. ಜಾಗತೀಕರಣದ ನೀತಿಯು ವಿದೇಶಿ ವ್ಯಾಪಾರ ಮತ್ತು ವಿದೇಶಿ ಹೂಡಿಕೆ ಎರಡನ್ನೂ ಪ್ರೋತ್ಸಾಹಿಸುತ್ತದೆ.

ಜಾಗತೀಕರಣ ಎಂದರೆ ಅಂತರರಾಷ್ಟ್ರೀಯ ವ್ಯಾಪಾರ ಮತ್ತು ಬಂಡವಾಳ ಚಲನೆಯ ಮೇಲಿನ ಅಡೆತಡೆಗಳನ್ನು ತೆಗೆದುಹಾಕುವ ಮೂಲಕ ರಾಷ್ಟ್ರೀಯ ಆರ್ಥಿಕತೆಯನ್ನು ವಿಶ್ವ ಆರ್ಥಿಕತೆಯೊಂದಿಗೆ ಸಂಯೋಜಿಸುವುದು. ಜಾಗತೀಕರಣವು ಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳ ಫಲಿತಾಂಶವಾಗಿದೆ. ಇದು ವಿಶ್ವದ ಆರ್ಥಿಕತೆಯೊಂದಿಗೆ ದೇಶದ ಆರ್ಥಿಕತೆಯ ಏಕೀಕರಣವಾಗಿದೆ, ಮತ್ತು ಇದು ಜಗತ್ತನ್ನು ಹೆಚ್ಚಿನ ಪರಸ್ಪರ ಅವಲಂಬನೆ ಮತ್ತು ಏಕೀಕರಣದ ಕಡೆಗೆ ಪರಿವರ್ತಿಸುವ ಗುರಿಯನ್ನು ಹೊಂದಿರುವ ವಿವಿಧ ನೀತಿಗಳ ಗುಂಪಿನ ಫಲಿತಾಂಶವಾಗಿದೆ. ಇದು ಆರ್ಥಿಕ, ಸಾಮಾಜಿಕ ಮತ್ತು ಭೌಗೋಳಿಕ ಗಡಿಗಳನ್ನು ಮೀರಿದ ನೆಟ್‌ವರ್ಕ್‌ಗಳು ಮತ್ತು ಚಟುವಟಿಕೆಗಳ ರಚನೆಯನ್ನು ಒಳಗೊಂಡಿರುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಜಾಗತೀಕರಣವು ಗಡಿಯಿಲ್ಲದ ಜಗತ್ತನ್ನು ಸೃಷ್ಟಿಸುವ ಗುರಿಯನ್ನು ಹೊಂದಿದೆ.

**ಭಾರತೀಯ ಆರ್ಥಿಕತೆಯ ಜಾಗತೀಕರಣದಿಂದ ಮಾಡಿದ ಬದಲಾವಣೆಗಳು**

ಹೊಸ ಆರ್ಥಿಕ ನೀತಿಯು ಉನ್ನತ ತಂತ್ರಜ್ಞಾನ ಮತ್ತು ಹೆಚ್ಚಿನ ಹೂಡಿಕೆ ಆದ್ಯತೆಯ ಕೈಗಾರಿಕೆಗಳ ನಿರ್ದಿಷ್ಟ ಪಟ್ಟಿಯನ್ನು ಸಿದ್ಧಪಡಿಸಿದೆ, ಇದರಲ್ಲಿ ವಿದೇಶಿ ನೇರ ಹೂಡಿಕೆಗೆ ಶೇಕಡಾ **51** ರಷ್ಟು ವಿದೇಶಿ ಷೇರುಗಳ ನಿಯತವಾದ ಅನುಮತಿ ಲಭ್ಯವಿರುತ್ತದೆ. ವಿದೇಶಿ ತಂತ್ರಜ್ಞಾನ ಒಪ್ಪಂದಗಳಿಗೆ ಸಂಬಂಧಿಸಿದಂತೆ, ಹೆಚ್ಚಿನ ಆದ್ಯತೆಯ ಉದ್ಯಮದಲ್ಲಿ 1 ಕೋಟಿ ರೂಪಾಯಿಗಳವರೆಗೆ ನಿಯತವಾದ ಅನುಮತಿಯನ್ನು ನೀಡಲಾಗುತ್ತದೆ. ವಿದೇಶಿ ತಂತ್ರಜ್ಞರನ್ನು ನೇಮಿಸಿಕೊಳ್ಳಲು ಅಥವಾ ವಿದೇಶದಲ್ಲಿ ಸ್ಥಳೀಯವಾಗಿ ಅಭಿವೃದ್ಧಿಪಡಿಸಿದ ತಂತ್ರಜ್ಞಾನವನ್ನು ಪರೀಕ್ಷಿಸಲು ಈಗ ಯಾವುದೇ ಅನುಮತಿಯ ಅಗತ್ಯವಿಲ್ಲ. ಭಾರತೀಯ ಕರೆನ್ಸಿಯ ಅಂತರರಾಷ್ಟ್ರೀಯ ಹೊಂದಾಣಿಕೆಗಾಗಿ, ಜುಲೈ 1991 ರಲ್ಲಿ ರೂಪಾಯಿಯನ್ನು ಶೇಕಡ 20 ರಷ್ಟು ಅಪಮೌಲ್ಯಗೊಳಿಸಲಾಯಿತು. ಇದು ರಫ್ತುಗಳನ್ನು ಉತ್ತೇಜಿಸಿತು, ಆಮದುಗಳನ್ನು ನಿರುತ್ಸಾಹಗೊಳಿಸಿತು ಮತ್ತು ವಿದೇಶಿ ಬಂಡವಾಳದ ಒಳಹರಿವನ್ನು ಹೆಚ್ಚಿಸಿತು. ಆರ್ಥಿಕತೆಯನ್ನು ಪ್ರಪಂಚದೊಂದಿಗೆ ಸಂಯೋಜಿಸಲು, 1992-93 ರ ಕೇಂದ್ರ ಆಯವ್ಯಯ (ಬಜೆಟ್) ಭಾರತೀಯ ರೂಪಾಯಿಯನ್ನು ಭಾಗಶಃ ಪರಿವರ್ತಿಸಿತು ಮತ್ತು ನಂತರ 1993-94 ರ ಆಯವ್ಯಯದಲ್ಲಿ ಕೇವಲ ಚಾಲ್ತಿ ಖಾತೆ ವಹಿವಾಟಿನಲ್ಲಿ ರೂಪಾಯಿ ಸಂಪೂರ್ಣವಾಗಿ

ಪರಿವರ್ತನೆಗೊಂಡಿತು. ಭಾರತದ ವಿದೇಶಿ ವ್ಯಾಪಾರದ ಜಾಗತೀಕರಣದ ಚೌಕಟ್ಟನ್ನು ಸ್ಥಾಪಿಸಲು ಐದು ವರ್ಷಗಳ ರಫ್ತು-ಆಮದು ನೀತಿಯನ್ನು (1992-97) ಸರ್ಕಾರ ಘೋಷಿಸಿತು. ಈ ನೀತಿಯು ಬಾಹ್ಯ ವ್ಯಾಪಾರದ ಮೇಲಿನ ಎಲ್ಲಾ ನಿರ್ಬಂಧಗಳು ಮತ್ತು ನಿಯಂತ್ರಣಗಳನ್ನು ತೆಗೆದುಹಾಕಿತು ಮತ್ತು ರಫ್ತು ಮತ್ತು ಆಮದುಗಳಿಗೆ ಸಂಬಂಧಿಸಿದಂತೆ ಮಾರುಕಟ್ಟೆ ಶಕ್ತಿಗಳಿಗೆ ಹೆಚ್ಚಿನ ಪಾತ್ರ ವಹಿಸಲು ಅವಕಾಶ ಮಾಡಿಕೊಟ್ಟಿತು. ಭಾರತೀಯ ಆರ್ಥಿಕತೆಯನ್ನು ಜಾಗತಿಕ ಸ್ಪರ್ಧೆಯ ವ್ಯಾಪ್ತಿಯಲ್ಲಿ ತರುವ ಸಲುವಾಗಿ ಸರ್ಕಾರವು ಅಮದು ರಫ್ತು ಸುಂಕವನ್ನು (ಕಸ್ಟಮ್ಸ್) ಗಣನೀಯ ಪ್ರಮಾಣದಲ್ಲಿ ಮಾರ್ಪಡಿಸಿದೆ. ಅದರಂತೆ, 2007-2008 ರ ಬಜೆಟ್‌ನಲ್ಲಿ ಅಮದು ರಫ್ತು ಸುಂಕದ ಗರಿಷ್ಠ ದರವನ್ನು ಕೆಲವು ಸರಕುಗಳ ಮೇಲಿನ ಶೇಕಡಾ 250 ರಿಂದ 10 ಕ್ಕೆ ಇಳಿಸಲಾಗಿದೆ.

**3.1 ಜಾಗತೀಕರಣದ ಸಕಾರಾತ್ಮಕ ಮತ್ತು ನಕಾರಾತ್ಮಕ ಲಕ್ಷಣಗಳು**

ಉದಾರೀಕರಣ ಮತ್ತು ಖಾಸಗೀಕರಣ ನೀತಿಗಳ ಮೂಲಕ ಜಾಗತೀಕರಣದ ಪ್ರಕ್ರಿಯೆಯು ಭಾರತ ಮತ್ತು ಇತರ ದೇಶಗಳಿಗೆ ಧನಾತ್ಮಕ ಮತ್ತು ಋಣಾತ್ಮಕ ಫಲಿತಾಂಶಗಳನ್ನು ನೀಡಿದೆ.

**ಜಾಗತೀಕರಣದ ಪರವಾದ ವಾದಗಳು**

ಜಾಗತೀಕರಣವು ಸಂಪನ್ಮೂಲಗಳ ಹಂಚಿಕೆಯ ದಕ್ಷತೆಯನ್ನು ಸುಧಾರಿಸಲು ಕಾರಣವಾಯಿತು, ಬಂಡವಾಳ ಉತ್ಪಾದನಾ ಅನುಪಾತವನ್ನು ಕಡಿಮೆ ಮಾಡಿತು ಮತ್ತು ವಿದೇಶಿ ಬಂಡವಾಳದ ಒಳಹರಿವು ಹೆಚ್ಚಿಸಿತು, ಇದು ತಂತ್ರಜ್ಞಾನವನ್ನು ದೇಶಕ್ಕೆ ನವೀಕರಿಸಿತು ಮತ್ತು ಆರ್ಥಿಕತೆಯ ಸರಾಸರಿ ಬೆಳವಣಿಗೆಯ ದರವನ್ನು ಹೆಚ್ಚಿಸಿತು. ಇದು ದೇಶಗಳಲ್ಲಿ ಸರಕು ಮತ್ತು ಸೇವೆಗಳ ಹರಿವು ಹೆಚ್ಚಿಸಲು ಕಾರಣವಾಯಿತು. ಇದರ ಪರಿಣಾಮವಾಗಿ ವಿಶ್ವ ವ್ಯಾಪಾರವು ಪ್ರವರ್ಧಮಾನಕ್ಕೆ ಬಂದಿದೆ. ಇದು ವಾಸ್ತವವಾಗಿ, ಭಾರತದಂತಹ ಕಾರ್ಮಿಕ ಸಮೃದ್ಧ ಆರ್ಥಿಕತೆಗಳಲ್ಲಿ ಬಂಡವಾಳದ ಕೊರತೆ, ಉತ್ಪಾದನೆ ಮತ್ತು ವ್ಯಾಪಾರ ಮಾದರಿಯನ್ನು ಮರುಹಂಚಿಕೆ ಮಾಡಲು ಸಹಾಯ ಮಾಡಿತು. ಇದು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಆರ್ಥಿಕ ಸಮೃದ್ಧಿ ಮತ್ತು ಅವಕಾಶವನ್ನು ಹೆಚ್ಚಿಸಿದೆ. ಅಗ್ಗದ ಮತ್ತು ಉತ್ತಮ ಗುಣಮಟ್ಟದ ಗ್ರಾಹಕ ಸರಕುಗಳನ್ನು ಆಮದು ಮಾಡಿದ ತಂತ್ರಜ್ಞಾನದೊಂದಿಗೆ ದೇಶದಲ್ಲಿ ತಯಾರಿಸಲಾಗುತ್ತದೆ. ವಿದೇಶಿ ಬಂಡವಾಳ ಮತ್ತು ವಿದೇಶಿ ಬ್ಯಾಂಕುಗಳ ಸ್ಪರ್ಧೆಯೊಂದಿಗೆ ಬ್ಯಾಂಕಿಂಗ್ ಮತ್ತು ಹಣಕಾಸು ಕ್ಷೇತ್ರದಲ್ಲಿ ಸುಧಾರಣೆ ಕಂಡುಬಂದಿದೆ.

**ಜಾಗತೀಕರಣದ ವಿರುದ್ಧದ ವಾದಗಳು**

ಜಾಗತೀಕರಣದ ಪ್ರಯೋಜನಗಳು ಅಭಿವೃದ್ಧಿ ಹೊಂದಿದ ದೇಶಗಳಿಗೆ ಹೆಚ್ಚು ತಲುಪಿದವು, ಏಕೆಂದರೆ ಆ ದೇಶಗಳು ಇತರ ದೇಶಗಳಲ್ಲಿ ತಮ್ಮ ಮಾರುಕಟ್ಟೆಗಳನ್ನು ವಿಸ್ತರಿಸಲು ಸಾಧ್ಯವಾಯಿತು ಎಂಬುದಾಗಿ ಜಾಗತೀಕರಣವನ್ನು ಕೆಲವು

ವಿದ್ವಾಂಸರು ಟೀಕಿಸಿದ್ದಾರೆ. ವಾಸ್ತವವಾಗಿ ಜಾಗತೀಕರಣವು ಬಡ ದೇಶಗಳಿಗೆ ಸೇರಿದ ಜನರ ಕಲ್ಯಾಣ ಮತ್ತು ಗುರುತನ್ನು ರಾಜಿ ಮಾಡುತ್ತದೆ. ಮಾರುಕಟ್ಟೆ-ಚಾಲಿತ ಜಾಗತೀಕರಣವು ರಾಷ್ಟ್ರಗಳು ಮತ್ತು ಜನರಲ್ಲಿ ಆರ್ಥಿಕ ಅಸಮಾನತೆಯನ್ನು ಹೆಚ್ಚಿಸುತ್ತದೆ. ಎಲ್ಲಾ ದೇಶಗಳು ತಮ್ಮ ಪ್ರಾಂತ್ಯದ ಹೊರಗಿನ ಅಭಿವೃದ್ಧಿಗೆ ಅವಕಾಶವೀಯುತ್ತವೆ (ಯುಎಸ್ ಸಬ್-ಪ್ರೈಮ್ ಬಿಕ್ಕಟ್ಟು, ಯುರೋ ಬಿಕ್ಕಟ್ಟು ಇತ್ಯಾದಿ).

**3.2 ಹೊರಗುತ್ತಿಗೆ**

ಜಾಗತೀಕರಣದ ಪ್ರಕ್ರಿಯೆಯ ಪ್ರಮುಖ ಫಲಿತಾಂಶ ಇದು. ಹೊರಗಿನ ಪ್ರಪಂಚದಿಂದ ವ್ಯಾಪಾರ ಸೇವೆಗಳನ್ನು ನೇಮಿಸಿಕೊಳ್ಳುವ ವ್ಯವಸ್ಥೆಯನ್ನು ಇದು ಸೂಚಿಸುತ್ತದೆ. ಈ ಸೇವೆಗಳಲ್ಲಿ: ಕಾಲ್ ಸೆಂಟರ್, ಪ್ರತಿಲೇಖನ (ಟ್ರಾನ್ಸ್-ಸ್ಕ್ರಿಪ್ಶನ್) ಕ್ಲಿನಿಕಲ್ ಸಲಹೆ, ಬೋಧನೆ / ತರಬೇತಿ ಇತ್ಯಾದಿ ಸೇರಿವೆ.

ಭಾರತವು ಹೊರಗುತ್ತಿಗೆಗೆ ಒಂದು ಪ್ರಮುಖ ತಾಣವಾಗಿ ಹೊರಹೊಮ್ಮುತ್ತಿದೆ, ವಿಶೇಷವಾಗಿ ಬಿಪಿಓ ಕ್ಷೇತ್ರದಲ್ಲಿ, (ಬ್ಯುಸಿನೆಸ್ ಪ್ರಾಸೆಸ್ ಔಟ್‌ಸೋರ್ಸಿಂಗ್ (ವ್ಯಾಪಾರ ಪ್ರಕ್ರಿಯೆ ಹೊರಗುತ್ತಿಗೆ), ಇದನ್ನು ಕಾಲ್ ಸೆಂಟರ್ ಎಂದೂ ಕರೆಯುತ್ತಾರೆ). ಇದಕ್ಕೆ ಕಾರಣ (i) ಭಾರತದಲ್ಲಿ ಅಗ್ಗದ ಕಾರ್ಮಿಕರ ಲಭ್ಯತೆ, ಅಥವಾ ನುರಿತ ಕಾರ್ಮಿಕರಿಗೆ ಕಡಿಮೆ ವೇತನ ದರ, ಮತ್ತು (ii) ಭಾರತದಲ್ಲಿ ಐಟಿ ಉದ್ಯಮದ ಕ್ರಾಂತಿಕಾರಿ ಬೆಳವಣಿಗೆ.

ಧ್ವನಿ ಆಧಾರಿತ ವ್ಯವಹಾರ ಪ್ರಕ್ರಿಯೆಗಳು (ಇದನ್ನು ಬಿಪಿಓ ಅಥವಾ ಕಾಲ್ ಸೆಂಟರ್‌ಗಳು ಎಂದು ಕರೆಯಲಾಗುತ್ತದೆ); ರೆಕಾರ್ಡ್ ಕೀಪಿಂಗ್; ಅಕೌಂಟನ್ಸಿ; ಬ್ಯಾಂಕಿಂಗ್ ಸೇವೆಗಳು; ಸಂಗೀತ ರೆಕಾರ್ಡಿಂಗ್; ಚಲನಚಿತ್ರ ಎಡಿಟಿಂಗ್; ಪುಸ್ತಕ ಪ್ರತಿಲೇಖನ; ಕ್ಲಿನಿಕಲ್ ಸಲಹೆ, ಇತ್ಯಾದಿ ಕೆಲವು ಸೇವೆಗಳನ್ನು ಭಾರತದ ಕಂಪೆನಿಗಳು ಹೊರಗುತ್ತಿಗೆ ನೀಡುತ್ತಿವೆ.

**3.3 ವಿಶ್ವ ವಾಣಿಜ್ಯ ಸಂಸ್ಥೆ (ಡಬ್ಲೂಟಿಒ)**

ವ್ಯಾಪಾರ ಮತ್ತು ಸುಂಕದ ಮೇಲಿನ ಸಾಮಾನ್ಯ ಒಪ್ಪಂದವನ್ನು (GATT-ಜನರಲ್ ಅಗ್ರೀಮೆಂಟ್ ಆನ್ ಟ್ರೇಡ್ ಆ್ಯಂಡ್ ಟ್ಯಾರಿಫ್) ಜಾಗತಿಕ ವ್ಯಾಪಾರ ಸಂಸ್ಥೆಯಾಗಿ 1948 ರಲ್ಲಿ 23 ದೇಶಗಳೊಂದಿಗೆ ಸ್ಥಾಪಿಸಲಾಯಿತು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಎಲ್ಲಾ ದೇಶಗಳಿಗೆ ಸಮಾನ ಅವಕಾಶಗಳನ್ನು ಒದಗಿಸುವ ಮೂಲಕ ಎಲ್ಲಾ ಬಹುಪಕ್ಷೀಯ ವ್ಯಾಪಾರ ಒಪ್ಪಂದಗಳನ್ನು ನಿರ್ವಹಿಸಲು ಗ್ಯಾಟ್ ಅನ್ನು ಸ್ಥಾಪಿಸಲಾಯಿತು. 1995 ರಲ್ಲಿ ಗ್ಯಾಟ್-ನ ಉತ್ತರಾಧಿಕಾರಿ ಸಂಸ್ಥೆಯಾಗಿ ಡಬ್ಲೂಟಿಒ ಅನ್ನು ಸ್ಥಾಪಿಸಲಾಯಿತು. ಡಬ್ಲೂಟಿಒ ಒಪ್ಪಂದಗಳು ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಅನುಕೂಲವಾಗುವಂತೆ ಸರಕುಗಳ ಮತ್ತು ಸೇವೆಗಳ ವ್ಯಾಪಾರವನ್ನು ಒಳಗೊಂಡಿವೆ. ಪ್ರಸ್ತುತ, ಡಬ್ಲೂಟಿಒನಲ್ಲಿ 164 ಸದಸ್ಯ ರಾಷ್ಟ್ರಗಳಿವೆ ಮತ್ತು ಎಲ್ಲಾ ಸದಸ್ಯರು ಡಬ್ಲೂಟಿಒ ನಿಯಮಗಳ ಅಡಿಯಲ್ಲಿ ರೂಪಿಸಲಾದ ಕಾನೂನುಗಳು ಮತ್ತು ನೀತಿಗಳಿಗೆ ಬದ್ಧರಾಗಿರಬೇಕು. ಡಬ್ಲೂಟಿಒನ ಪ್ರಮುಖ ಸದಸ್ಯರಾಗಿ, ನ್ಯಾಯಯುತ ಜಾಗತಿಕ ನಿಯಮಗಳು,

ನಿಬಂಧನೆಗಳನ್ನು ರೂಪಿಸುವಲ್ಲಿ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳ ಹಿತಾಸಕ್ತಿಗಳನ್ನು ಪ್ರತಿಪಾದಿಸುವಲ್ಲಿ ಭಾರತ ಮುಂಚೂಣಿಯಲ್ಲಿದೆ. ಡಬ್ಲೂಟಿಓಗೆ ಭಾರತ ನೀಡಿದ ಬದ್ಧತೆಗಳನ್ನು ಉಳಿಸಿಕೊಂಡಿದೆ. ಆಮದಿನ ಮೇಲಿನ ಪರಿಮಾಣಾತ್ಮಕ ನಿರ್ಬಂಧಗಳನ್ನು ತೆಗೆದುಹಾಕಿ ಮತ್ತು ಸುಂಕದ ದರವನ್ನು ಕಡಿಮೆ ಮಾಡುವ ಮೂಲಕ ವ್ಯಾಪಾರವನ್ನು ಉದಾರೀಕರಣಗೊಳಿಸಲು ಭಾರತ ಸಮಂಜಸವಾದ ಕ್ರಮಗಳನ್ನು ತೆಗೆದುಕೊಂಡಿದೆ.

**WTO ನ ಕಾರ್ಯಗಳು:**

i. ಸುಂಕವನ್ನು ಮತ್ತು ಸುಂಕ-ರಹಿತ ಅಡೆತಡೆಗಳನ್ನು ತೆಗೆದುಹಾಕುವುದರ ಮೂಲಕ ಅಂತರರಾಷ್ಟ್ರೀಯ ವ್ಯಾಪಾರವನ್ನು (ದ್ವಿಪಕ್ಷೀಯ ಮತ್ತು ಬಹು-ಪಕ್ಷೀಯ ವ್ಯಾಪಾರ) ಸುಗಮಗೊಳಿಸುವುದು;
ii. ರಾಷ್ಟ್ರಗಳು ವ್ಯಾಪಾರದ ಮೇಲೆ ಅನಿಯಂತ್ರಿತ ನಿರ್ಬಂಧಗಳನ್ನು ವಿಧಿಸಲು ಸಾಧ್ಯವಿಲ್ಲದಂತೆ ನಿಯಮ-ಆಧಾರಿತ ವ್ಯಾಪಾರ ಆಡಳಿತವನ್ನು ಸ್ಥಾಪಿಸುವುದು,;
iii. ಸೇವೆಗಳ ಉತ್ಪಾದನೆ ಮತ್ತು ವ್ಯಾಪಾರವನ್ನು ವಿಸ್ತರಿವುದು;
iv. ವಿಶ್ವ ಸಂಪನ್ಮೂಲಗಳ ಗರಿಷ್ಠ ಬಳಕೆಯನ್ನು ಖಚಿತಪಡಿಸಿಕೊಳ್ಳುವುದು; ಮತ್ತು
v. ಪರಿಸರವನ್ನು ರಕ್ಷಿಸುವುದು.
vi. ವ್ಯಾಪಾರ ಮತ್ತು ಸುಂಕಕ್ಕೆ ಸಂಬಂಧಿಸಿದ ಭವಿಷ್ಯದ ಕಾರ್ಯತಂತ್ರಗಳನ್ನು ನಿರ್ಧರಿಸಲು ಸದಸ್ಯ ರಾಷ್ಟ್ರಗಳಿಗೆ ವೇದಿಕೆಯನ್ನು ಒದಗಿಸುವುದು.

## 4. ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ನೀತಿಗಳ ಮೌಲ್ಯನಿರ್ಣಯ (ಆರ್ಥಿಕ ಸುಧಾರಣೆಗಳು)

ಆರ್ಥಿಕ ಸುಧಾರಣೆಗಳು ವಿವಿಧ ಹಂತಗಳಲ್ಲಿ ಮಿಶ್ರ ಪ್ರತಿಕ್ರಿಯೆಗಳನ್ನು ಸೃಷ್ಟಿಸಿದವು. ಆರ್ಥಿಕ ಸುಧಾರಣೆಗಳ ಕೆಲವು ಸಕಾರಾತ್ಮಕ ಮತ್ತು ನಕಾರಾತ್ಮಕ ಅಂಶಗಳನ್ನು ಚರ್ಚಿಸೋಣ.

### 4.1 ಆರ್ಥಿಕ ಸುಧಾರಣೆಗಳ ಪರವಾದ ವಾದಗಳು

ಆರ್ಥಿಕ ಸುಧಾರಣೆಗಳ ಪರವಾಗಿ ಮಂಡಿಸಲಾದ ಕೆಲವು ಪ್ರಮುಖ ವಾದಗಳು ಈ ಕೆಳಗಿನಂತಿವೆ:

**1. ಅಧಿಕ ಬೆಳವಣಿಗೆಯ ದರ:** 1980-91 ರ ಅವಧಿಯಲ್ಲಿ ಶೇಕಡ 5.6 ರಷ್ಟು ಇದ್ದ ಜಿಡಿಪಿಯ ಬೆಳವಣಿಗೆಯು 1992-2001 ರ ಅವಧಿಯಲ್ಲಿ ಶೇ 6.1 ಕ್ಕೆ ಮತ್ತು 2007-12 ರಲ್ಲಿ 8.2 ಶೇಕಡಕ್ಕೆ ಏರಿದೆ. ಸುಧಾರಣೆಯ ಅವಧಿಯಲ್ಲಿ ಒಟ್ಟಾರೆ ಜಿಡಿಪಿ ಬೆಳವಣಿಗೆಯಲ್ಲಿ ಹೆಚ್ಚಳ ಕಂಡುಬಂದಿದೆ ಎಂದು ಇದು ತೋರಿಸುತ್ತದೆ. ಸುಧಾರಣೆಯ ಅವಧಿಯಲ್ಲಿ, ಕೃಷಿ ಮತ್ತು

ಕೈಗಾರಿಕಾ ಕ್ಷೇತ್ರಗಳ ಬೆಳವಣಿಗೆ ಕುಸಿಯಿತು, ಆದರೆ ಸೇವಾ ಕ್ಷೇತ್ರದ ಬೆಳವಣಿಗೆ ಹೆಚ್ಚಾಗಿದೆ. ಬೆಳವಣಿಗೆಯನ್ನು ಮುಖ್ಯವಾಗಿ ಸೇವಾ ಕ್ಷೇತ್ರದ ಬೆಳವಣಿಗೆಯಿಂದ ನಡೆಸಲಾಗುತ್ತದೆ ಎಂದು ಇದು ಸೂಚಿಸುತ್ತದೆ. ಪ್ರಸ್ತುತ, ಜಿಡಿಪಿಯ ಬೆಳವಣಿಗೆಯ ದರವು ಶೇಕಡಾ 8 ಕ್ಕಿಂತ ಹೆಚ್ಚಿದೆ ಎಂದು ಅಂದಾಜಿಸಲಾಗಿದೆ.

**2. ವಿದೇಶಿ ನೇರ ಹೂಡಿಕೆಯಲ್ಲಿ ತ್ವರಿತ ಹೆಚ್ಚಳ:** ಹೊಸ ಆರ್ಥಿಕ ನೀತಿಯು ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಮತ್ತು ವಿದೇಶಿ ವಿನಿಮಯ ಮೀಸಲುಗಳ ತ್ವರಿತ ಏರಿಕೆಗೆ ಕಾರಣವಾಗಿದೆ. ವಿದೇಶಿ ವಿನಿಮಯ ಸಂಗ್ರಹವು 1990-91 ರಲ್ಲಿ ಸುಮಾರು 100 ಮಿಲಿಯನ್ ಡಾಲರ್‌ನಿಂದ 2015-16 ರಲ್ಲಿ 350 ಬಿಲಿಯನ್ ಡಾಲರ್‌ಗೆ ಏರಿಕೆಯಾಗಿದೆ.

**3. ರಫ್ತು ಹೆಚ್ಚಳ:** 1990-91 ರ ನಂತರ ಭಾರತದ ರಫ್ತು ಮತ್ತು ಆಮದಿನ ಮೌಲ್ಯ ಗಣನೀಯವಾಗಿ ಹೆಚ್ಚಾಗಿದೆ. ಆಟೋ ಭಾಗಗಳು, ಎಂಜಿನಿಯರಿಂಗ್ ಸರಕುಗಳು, ಐಟಿ ಸಾಫ್ಟ್‌ವೇರ್ ಮತ್ತು ಜವಳಿ ರಫ್ತುಗಳಲ್ಲಿ ಭಾರತ ಗಣನೀಯ ಏರಿಕೆ ಕಂಡಿದೆ.

**4. ಹಣದುಬ್ಬರ ನಿಯಂತ್ರಣ:** ಉತ್ಪಾದನೆಯಲ್ಲಿನ ಹೆಚ್ಚಳ, ತೆರಿಗೆ ಸುಧಾರಣೆಗಳು ಮತ್ತು ಇತರ ಸುಧಾರಣೆಗಳು ಹಣದುಬ್ಬರವನ್ನು ನಿಯಂತ್ರಿಸಲು ಸಹಾಯ ಮಾಡಿದೆ. ವಾರ್ಷಿಕ ಹಣದುಬ್ಬರ ದರವು 1991 ರಲ್ಲಿ ಗರಿಷ್ಠ ಮಟ್ಟ 17 ರಿಂದ 2012-13 ರಲ್ಲಿ ಶೇಕಡಾ 7.6 ಕ್ಕೆ ಇಳಿದಿದೆ.

**5. ಖಾಸಗಿ ವಲಯದ ಪಾತ್ರದಲ್ಲಿ ಹೆಚ್ಚಳ:** 1991 ರಿಂದ ಖಾಸಗಿ ವಲಯವು ಪ್ರಬಲ ಪಾತ್ರ ವಹಿಸುತ್ತಿದೆ. ಈ ಹಿಂದೆ ಸಾರ್ವಜನಿಕ ವಲಯಕ್ಕೆ ಮೀಸಲಾಗಿರುವ ಪ್ರದೇಶಗಳಲ್ಲಿನ ಪರವಾನಗಿ ನೀಡುವ ವ್ಯವಸ್ಥೆಯನ್ನು ರದ್ದುಪಡಿಸಿರುವುದು ಮತ್ತು ಖಾಸಗಿ ವಲಯದ ಪ್ರವೇಶದ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕಿರುವುದು, ಖಾಸಗಿ ವಲಯದ ಕಾರ್ಯಾಚರಣೆಯ ಪ್ರದೇಶವನ್ನು ವಿಸ್ತರಿಸಿದೆ.

**6. ಕೈಗಾರಿಕಾ ವಲಯದ ಕಾರ್ಯಕ್ಷಮತೆ:** ಕೈಗಾರಿಕಾ ವಲಯವು 2003-04 ರಿಂದ 8 ಪ್ರತಿಶತದಷ್ಟು ಹೆಚ್ಚಿನ ಬೆಳವಣಿಗೆಯ ದರವನ್ನು ಅನುಭವಿಸುತ್ತಿದೆ. ಇದು ಹನ್ನೆರಡನೇ ಯೋಜನೆಯ ಅವಧಿಯಲ್ಲಿ ಶೇಕಡಾ 7.4 ರಷ್ಟು ಬೆಳವಣಿಗೆಯ ದರವನ್ನು ಕಂಡಿದೆ.

### 4.2 ಆರ್ಥಿಕ ಸುಧಾರಣೆಗಳ ಟೀಕೆ

ಹೊಸ ಆರ್ಥಿಕ ಸುಧಾರಣೆಗಳ ವಿರುದ್ಧ ವಿಮರ್ಶಕರು ಸರಣಿ ಟೀಕೆಗಳನ್ನು ಎತ್ತಿದ್ದಾರೆ, ವಿಶೇಷವಾಗಿ ಉದ್ಯೋಗ, ಕೃಷಿ, ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸಿನ ನಿರ್ವಹಣೆಯ ಕ್ಷೇತ್ರಗಳಲ್ಲಿ.

ಸುಧಾರಣಾ ಅವಧಿಯಲ್ಲಿ ಜಿಡಿಪಿ ಬೆಳವಣಿಗೆಯ ದರವು ಹೆಚ್ಚಾಗಿದ್ದರೂ, ಅಂತಹ ಬೆಳವಣಿಗೆಯು ದೇಶದಲ್ಲಿ ಸಾಕಷ್ಟು ಉದ್ಯೋಗಾವಕಾಶಗಳನ್ನು ಸೃಷ್ಟಿಸುವಲ್ಲಿ ವಿಫಲವಾಗಿದೆ. ಇದು ನಿರುದ್ಯೋಗದ ಬೆಳವಣಿಗೆಗೆ ಕಾರಣವಾಗುತ್ತದೆ ಎಂದು ನಾವು ಹೇಳಬಹುದು. ಕೈಗಾರಿಕೆ, ವ್ಯಾಪಾರ ಮತ್ತು ಸೇವಾ ಕ್ಷೇತ್ರಗಳಿಗೆ ಹೋಲಿಸಿದರೆ ಹೊಸ ಆರ್ಥಿಕ ನೀತಿಯು ಕೃಷಿ ಕ್ಷೇತ್ರವನ್ನು ನಿರ್ಲಕ್ಷಿಸಿದೆ.

ಕೃಷಿ ಕ್ಷೇತ್ರದಲ್ಲಿ, ವಿಶೇಷವಾಗಿ ನೀರಾವರಿ, ವಿದ್ಯುತ್, ರಸ್ತೆಗಳ ಮಾರುಕಟ್ಟೆ ಸಂಪರ್ಕಗಳು ಮತ್ತು ಸಂಶೋಧನೆ ಮತ್ತು ವಿಸ್ತರಣೆಯನ್ನು ಒಳಗೊಂಡಿರುವ ಮೂಲಸೌಕರ್ಯಗಳಲ್ಲಿ ಸಾರ್ವಜನಿಕ ಹೂಡಿಕೆ ಸುಧಾರಣೆಯ ಅವಧಿಯಲ್ಲಿ ಕಡಿಮೆಯಾಗಿದೆ. ರಸಗೊಬ್ಬರ ಸಬ್ಸಿಡಿಯನ್ನು ತೆಗೆದುಹಾಕಿದ್ದರಿಂದ ಉತ್ಪಾದನಾ ವೆಚ್ಚ ಹೆಚ್ಚಾಯಿತು, ಇದು ಸಣ್ಣ ಮತ್ತು ಅತಿಸಣ್ಣ ರೈತರ ಮೇಲೆ ಪ್ರತಿಕೂಲ ಪರಿಣಾಮ ಬೀರಿತು. ಕೃಷಿ ಉತ್ಪನ್ನಗಳ ಮೇಲಿನ ಆಮದು ಸುಂಕವನ್ನು ಕಡಿಮೆ ಮಾಡುವ ನೀತಿಗಳು, ಕನಿಷ್ಠ ಬೆಂಬಲ ಬೆಲೆಯನ್ನು ತೆಗೆದುಹಾಕುವುದು, ಕೃಷಿ ಉತ್ಪನ್ನಗಳ ಮೇಲಿನ ಪರಿಮಾಣಾತ್ಮಕ ನಿರ್ಬಂಧಗಳನ್ನು ತೆಗೆದುಹಾಕುವುದರಿಂದ ಭಾರತೀಯ ರೈತರು ಹೆಚ್ಚಿದ ಅಂತರರಾಷ್ಟ್ರೀಯ ಸ್ಪರ್ಧೆಯನ್ನು ಎದುರಿಸಬೇಕಾಯಿತು. ಕೃಷಿಯಲ್ಲಿ ರಫ್ತು ಆಧಾರಿತ ನೀತಿ ತಂತ್ರಗಳಿಂದಾಗಿ, ಕೃಷಿ ಉತ್ಪಾದನೆಯು ಆಹಾರ ಧಾನ್ಯಗಳಿಂದ ರಫ್ತು ಮಾರುಕಟ್ಟೆಗೆ ನಗದು ಬೆಳೆಗಳಿಗೆ ಬದಲಾಯಿತು. ಇದು ಆಹಾರ ಧಾನ್ಯಗಳ ಬೆಲೆ ಏರಿಕೆಗೆ ಕಾರಣವಾಯಿತು.

ಜಾಗತೀಕರಣದ ಕಾರಣದಿಂದಾಗಿ, ಅಭಿವೃದ್ಧಿ ಹೊಂದಿದ ದೇಶಗಳಿಂದ ಹೆಚ್ಚಿನ ಸರಕು ಮತ್ತು ಬಂಡವಾಳದ ಹರಿವು ಕಂಡುಬಂದಿತು ಮತ್ತು ಇದರ ಪರಿಣಾಮವಾಗಿ, ದೇಶೀಯ ಕೈಗಾರಿಕೆಗಳು ಆಮದು ಮಾಡಿದ ಸರಕುಗಳಿಗೆ ಒಡ್ಡಿಕೊಂಡವು. ಅಗ್ಗದ ಆಮದುಗಳು ದೇಶೀಯ ಸರಕುಗಳ ಬೇಡಿಕೆಯನ್ನು ಬದಲಿಸಿದವು ಮತ್ತು ದೇಶೀಯ ತಯಾರಕರು ಆಮದುಗಳಿಂದ ಸ್ಪರ್ಧೆಯನ್ನು ಎದುರಿಸಲಾರಂಭಿಸಿದರು. ಇದು ಕೈಗಾರಿಕಾ ವಲಯದ ನಿಧಾನಗತಿಗೆ ಕಾರಣವಾಯಿತು, ಇದಲ್ಲದೆ ವಿದ್ಯುತ್ ಸರಬರಾಜು ಸೇರಿದಂತೆ ಮೂಲಸೌಕರ್ಯ ಸೌಲಭ್ಯಗಳು ಹೂಡಿಕೆಯ ಕೊರತೆಯಿಂದಾಗಿ ಅಸಮರ್ಪಕವಾಗಿ ಉಳಿದಿವೆ. ಜವಳಿ ಮತ್ತು ಬಟ್ಟೆಗಳ ರಫ್ತಿಗೆ ಸಂಬಂಧಿಸಿದ ಎಲ್ಲಾ ಕೋಟಾ ನಿರ್ಬಂಧಗಳನ್ನು ಭಾರತದಿಂದ ತೆಗೆದುಹಾಕಲಾಗಿದೆ. ಆದರೆ ಯುಎಸ್ಎಯಂತಹ ಕೆಲವು ಅಭಿವೃದ್ಧಿ ಹೊಂದಿದ ದೇಶಗಳು ಭಾರತದಿಂದ ಜವಳಿ ಆಮದು ಮೇಲಿನ ಕೋಟಾ ನಿರ್ಬಂಧಗಳನ್ನು ತೆಗೆದುಹಾಕಿಲ್ಲ.

ಸರ್ಕಾರದ ಹೂಡಿಕೆ ಹೂಡಿಕೆ ನೀತಿ ಯಶಸ್ವಿಯಾಗಲಿಲ್ಲ ಏಕೆಂದರೆ, ಸಾರ್ವಜನಿಕ ವಲಯದ ಉದ್ಯಮಗಳ (ಪಿಎಸ್ಯು) ಆಸ್ತಿಗಳು ಕಡಿಮೆ ಮೌಲ್ಯದ್ದಾಗಿದ್ದು, ಖಾಸಗಿ ವಲಯಕ್ಕೆ ಅಗ್ಗದ ದರದಲ್ಲಿ ಮಾರಾಟವಾಗಿದ್ದವು. ಇದಲ್ಲದೆ, ಹೂಡಿಕೆಗಳಿಂದ ಬರುವ ಆದಾಯವನ್ನು ಪಿಎಸ್ಯುಗಳ ಅಭಿವೃದ್ಧಿಗೆ ಮತ್ತು ದೇಶದಲ್ಲಿ ಸಾಮಾಜಿಕ

ಮೂಲಸೌಕರ್ಯಗಳನ್ನು ನಿರ್ಮಿಸಲು ಬಳಸುವುದಕ್ಕಿಂತ ಹೆಚ್ಚಾಗಿ ಸರ್ಕಾರದ ಆದಾಯದ ಕೊರತೆಯನ್ನು ಸರಿದೂಗಿಸಲು ಬಳಸಲಾಗುತ್ತಿತ್ತು. ಈಗ ಭಾರತೀಯ ಆರ್ಥಿಕತೆಯಲ್ಲಿ ಎಂಎನ್‌ಸಿಗಳು ಪ್ರಬಲ ಪಾತ್ರ ವಹಿಸಿವೆ. ಅವರು ಭಾರತೀಯ ಮಾರುಕಟ್ಟೆಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಮತ್ತು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದಾರೆ. ಹೀಗೆ ಅವರು ಭಾರಿ ಲಾಭ ಗಳಿಸುತ್ತಿದ್ದಾರೆ. ಭಾರತೀಯರು ಕೆಲವೊಮ್ಮೆ ತಮ್ಮ ಹಣವನ್ನು ಮಾರುಕಟ್ಟೆಯಲ್ಲಿನ ವಿವಿಧ ಜಾಗತಿಕ ಬ್ರ್ಯಾಂಡ್‌ಗಳಿಗೆ ವ್ಯರ್ಥವಾಗಿ ಖರ್ಚು ಮಾಡುತ್ತಾರೆ. ಹೊಸ ನೀತಿಯು ಐಷಾರಾಮಿ ಮತ್ತು ಉತ್ತಮ ಬಳಕೆಯ ವಸ್ತುಗಳ ಉತ್ಪಾದನೆಯನ್ನು ಉತ್ತೇಜಿಸುವ ಮೂಲಕ ಗ್ರಾಹಕರ ಅಪಾಯಕಾರಿ ಪ್ರವೃತ್ತಿಯನ್ನು ಪ್ರೋತ್ಸಾಹಿಸುತ್ತಿದೆ. ದೇಶದ ಲಕ್ಷಾಂತರ ಜನರಿಗೆ ಜೀವನವನ್ನು ಒದಗಿಸುವ ಕೃಷಿ ಮತ್ತು ಕೈಗಾರಿಕೆಗಳಂತಹ ಪ್ರಮುಖ ಕ್ಷೇತ್ರಗಳಿಗಿಂತ ದೂರಸಂಪರ್ಕ, ಮಾಹಿತಿ ತಂತ್ರಜ್ಞಾನ, ಹಣಕಾಸು, ಮನರಂಜನೆ, ಪ್ರಯಾಣ ಮತ್ತು ಆತಿಥ್ಯ ಸೇವೆಗಳು, ರಿಯಲ್ ಎಸ್ಟೇಟ್ ಮತ್ತು ವ್ಯಾಪಾರ ಮುಂತಾದ ಸೇವಾ ಕ್ಷೇತ್ರದ ಕೆಲವು ಆಯ್ದ ಕ್ಷೇತ್ರಗಳಲ್ಲಿ ಮಾತ್ರ ಬೆಳವಣಿಗೆಯನ್ನು ಕೇಂದ್ರೀಕರಿಸಲಾಗಿದೆ.

## 5. ಸಾರಾಂಶ

ಹೊಸ ಆರ್ಥಿಕ ನೀತಿ 1991 ಅನ್ನು ಕೆಲವೊಮ್ಮೆ ಎಲ್‌ಪಿಜಿ (ಲಿಬರಲೈಸೇಷನ್-ಉದಾರೀಕರಣ, ಪ್ರೈವೇಟೈಸೇಷನ್-ಖಾಸಗೀಕರಣ ಮತ್ತು ಗ್ಲೋಬಲೈಸೇಷನ್-ಜಾಗತೀಕರಣ) ಎಂದು ಕರೆಯಲಾಗುತ್ತದೆ. ಈ ಎಲ್ಲಾ ನೀತಿಗಳ ಸಂಯೋಜನೆಯು ಭಾರತೀಯ ಆರ್ಥಿಕತೆಯ ಮೇಲೆ ಕೆಲವು ಸಕಾರಾತ್ಮಕ ಮತ್ತು ನಕಾರಾತ್ಮಕ ಫಲಿತಾಂಶಗಳನ್ನು ನೀಡಿದೆ. ಎಲ್ಲಾ ಬೀಗಗಳನ್ನು ತೆರೆಯಲು ಇದುವೇ ಮುಖ್ಯ ಕೀಲಿಕೈ ಅಲ್ಲ ಎಂಬುದನ್ನು ಗಮನಿಸಬೇಕಿದೆ. ಬಡತನ, ಆದಾಯದ ಅಸಮಾನತೆ, ಪ್ರಾದೇಶಿಕ ಅಸಮತೋಲನ ಮತ್ತು ನಿರುದ್ಯೋಗ ಮುಂತಾದ ಸಮಸ್ಯೆಗಳನ್ನು ಪರಿಹರಿಸಲು ಅದು ಸಾಧ್ಯವಾಗಲಿಲ್ಲ.

1991 ರ ಹೊಸ ಆರ್ಥಿಕ ನೀತಿಯಿಂದ, ಭಾರತದ ವ್ಯಾಪಾರ ಸಮತೋಲನ (ರಫ್ತು ಮತ್ತು ಆಮದು) ಮತ್ತು ಎಫ್‌ಡಿಐಗಳಲ್ಲಿನ ಪ್ರವೃತ್ತಿ ಗಣನೀಯ ಬದಲಾವಣೆಯನ್ನು ತೋರಿಸುತ್ತದೆ. ವಿಶ್ವ ವ್ಯಾಪಾರದಲ್ಲಿ ಭಾರತ ತನ್ನ ಸ್ಥಾನವನ್ನು ಸುಧಾರಿಸುತ್ತಿದೆ. ಇತ್ತೀಚಿನ ದಿನಗಳಲ್ಲಿ ಜಾಗತಿಕ ಮಾರುಕಟ್ಟೆಗಳಿಗೆ ಪ್ರವೇಶ, ಉನ್ನತ ತಂತ್ರಜ್ಞಾನ ಮತ್ತು ಸೇವಾ ಕ್ಷೇತ್ರದ ಬೆಳವಣಿಗೆ ಮತ್ತು ಅಭಿವೃದ್ಧಿಯ ಕಾರಣದಿಂದಾಗಿ ಭಾರತವು ಅಂತಾರಾಷ್ಟ್ರೀಯ ರಂಗದಲ್ಲಿ ಪ್ರಮುಖ ಪಾತ್ರ ವಹಿಸಿದೆ.